

ಹುಬ್ಬಳ್ಳಿಯ ಬಸವರಾಜ ಐಹೊಳೆ ಅಂಗವೈಕಲ್ಯದ ಬಾಧೆಗೊಳಗಾಗಿದ್ದರೂ ಚಹಾ ಮಾರುವ ಮೂಲಕ ಸ್ವಾವಲಂಬಿ. ಫೋಟೊ: ಗೋವಿಂದರಾಜ ಜವಳಿ

### 7. ಸೆನ್ಸರಿ ಪ್ರೋಸೆಸಿಂಗ್ ಡಿಸಾರ್ಡರ್

ದೇಹದ ಇಂದ್ರಿಯಗಳಿಂದ ಸಿಗುವ ಮಾಹಿತಿಯನ್ನು ಸ್ವೀಕರಿಸಲು ಮತ್ತು ಅರ್ಥಮಾಡಿಕೊಳ್ಳಲಾಗದ ಮೆದುಳಿನ ಸ್ಥಿತಿಯನ್ನು 'ಸೆನ್ಸರಿ ಪ್ರೋಸೆಸಿಂಗ್ ಡಿಸಾರ್ಡರ್' ಎನ್ನುತ್ತಾರೆ. ಕೇಳಿಸಿಕೊಳ್ಳುವುದು, ನೋಡುವುದು, ರುಚಿ, ವಾಸನೆ, ಭಾವನೆ ಮತ್ತು ದೇಹದ ಅರಿವುಗಳೆಲ್ಲ ಕನಿಷ್ಠ ಮಟ್ಟದಲ್ಲಿ ಇರುತ್ತವೆ. ಸುತ್ತ ಏನು ಜರುಗುತ್ತಿದೆ ಎಂಬುದನ್ನು ಗ್ರಹಿಸಲು ವ್ಯಕ್ತಿಯು ಬಹಳಷ್ಟು ಶ್ರಮ ಪಡಬೇಕಾಗುತ್ತದೆ. ಇದರಿಂದ ಬಳಲುವವರು ವಾತಾವರಣದ ಶಬ್ದಗಳಿಗೆ ತುಂಬಾ ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ ಮತ್ತು ಚಿಕ್ಕ ಶಬ್ದ ಕೂಡ ಇವರ ಕಿವಿಗಳಿಗೆ ದೊಡ್ಡ ಮಟ್ಟದ ನೋವು ತರುತ್ತದೆ. ಬೇರೆಯವರ ಅಂಗಿಯ ಭಾಗ ತಗುಲಿದರೂ ಇವರ ಚರ್ಮಕ್ಕೆ ಗಾಯವಾಗುತ್ತದೆ. ಇವರು ದೇಹದ ಸಮತೋಲನವಿಲ್ಲದೆ ಎದುರಿಗಿರುವ ವಸ್ತು ಮತ್ತು ವ್ಯಕ್ತಿಗಳ ಮೇಲೆ ಮುಗ್ಗರಿಸಿ ಬೀಳುತ್ತಾರೆ.

### 8. ಆಘಾತಕಾರಿ ಮೆದುಳಿನ ಗಾಯ (ಟ್ರಾಮ್ಯಾಟಿಕ್ ಬ್ರೇನ್ ಇಂಜುರಿ - ಟಿಬಿಐ)

ಹೊರಗಿನ ಗಾಯಗಳಿಂದಾಗಿ ಮೆದುಳಿಗೆ ಆಘಾತ ಉಂಟಾದಾಗ ಮೆದುಳಿನ ಸಹಜ ಕ್ರಿಯೆಗಳಲ್ಲಿ ಏರಿಳಿತಗಳಾಗುತ್ತವೆ. ಒತ್ತಾಯಪೂರ್ವಕ ನೆಗೆತ, ಬಲವಾದ ಹೊಡೆತ, ತಲೆಯ ಮತ್ತು ದೇಹದ ವಿಪರೀತ ಕುಲುಕಾಟ ಮತ್ತು ಹೊರಗಿನ ಮೊನಚಾದ ವಸ್ತುವು ಮೆದುಳಿನೊಳಗೆ ತೂರಿ ಬರುವುದರಿಂದ ಈ ರೀತಿಯ ವಿಕಲಾಂಗತೆ ತಲೆದೋರುತ್ತದೆ. ಕೆಲವು ಗಾಯಗಳು ತಾತ್ಕಾಲಿಕವಾಗಿರುತ್ತವೆ, ಇನ್ನೂ ಕೆಲವು ದೀರ್ಘಕಾಲದವರೆಗೂ ಇದ್ದು ವ್ಯಕ್ತಿಯ ಮಾತು, ಆಲೋಚನೆ, ನಡವಳಿಕೆ, ಚಿಂತನೆ ಪ್ರಕ್ರಿಯೆಗಳನ್ನೆಲ್ಲ ಬದಲಾಯಿಸಿ ಬಿಡುತ್ತದೆ. ದೀರ್ಘಕಾಲದ ಗಾಯಗಳು ಶಾಶ್ವತ ವೈಕಲ್ಯವನ್ನು ಉಂಟು ಮಾಡುತ್ತವೆ ಮತ್ತು ಕೆಲವು ಸಂದರ್ಭಗಳಲ್ಲಿ ಸಾವು ಕೂಡ ಸಂಭವಿಸುತ್ತದೆ.

### ಕುಸುಮ ರೋಗಿಗಳ ಸಂಜೀವಿನಿ

ದಾವಣಗೆರೆಯ ಬಾಪೂಜಿ ಆಸ್ಪತ್ರೆಯ ರಕ್ತನಿಧಿಯ (ಬ್ಲಡ್ ಬ್ಯಾಂಕ್) ಮುಖ್ಯಸ್ಥರಾಗಿರುವ ಡಾ. ಸುರೇಶ ಹನಗವಾಡಿ ಮೂಲತಃ ಹಿಮೋಫೀಲಿಯಾ ರೋಗಿ. ಅವರ ಎಳೆತನದಲ್ಲಿ ಸೋದರ ಮಾವ ನೀಲಕಂಠಪ್ಪ ಹಿಮೋಫೀಲಿಯಾದಿಂದ ನರಳುವುದನ್ನು ಕಣ್ಣಾರೆ ಕಂಡಿದ್ದರು. ಸರಿಯಾದ ಚಿಕಿತ್ಸೆ ದೊರಕದೆ ಅವರು ಕಾಲವಶರಾದದ್ದನ್ನು ಸಮೀಪದಿಂದ ನೋಡಿದ್ದ ಸುರೇಶ್ ವೈದ್ಯರಾಗಿ ಹಿಮೋಫೀಲಿಯಾ ರೋಗಿಗಳಿಗೆ ಚಿಕಿತ್ಸೆಯ ಸಂಪೂರ್ಣ ನೆರವು ಕಲ್ಪಿಸುವುದಾಗಿ ಪಣತೊಟ್ಟರು. ಅದರಂತೆ ಶ್ರಮಪಟ್ಟು ವೈದ್ಯಕೀಯ ಕೋರ್ಸ್ ಸೇರಿ, ಎಂಬಿಬಿಎಸ್ ಮುಗಿಸಿ ರೋಗ ಪತ್ತೆಶಾಸ್ತ್ರ (ಪೆಥಾಲಜಿ)ದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಕೈಯಲ್ಲಿ ಸ್ಟೆತೊಸ್ಕೋಪ್ ಹಿಡಿದ ದಿನದಂದೇ ಹಿಮೋಫೀಲಿಯಾ ರೋಗಿಗಳ ಸೇವೆಗೆ ಮುಂದಾದರು.

1990ರಲ್ಲಿ ಡಾ. ಸುರೇಶ್ ಅವರ ಶ್ರಮದ ಫಲವಾಗಿ ದಾವಣಗೆರೆಯಲ್ಲಿ ರೂಪುಗೊಂಡಿರುವ 'ಕರ್ನಾಟಕ ಹಿಮೋಫೀಲಿಯಾ ಸೊಸೈಟಿ'ಯ ವಿಶೇಷ ಆಸ್ಪತ್ರೆಯು ಹಿಮೋಫೀಲಿಯಾ ರೋಗಿಗಳ ಮೈಮನಗಳಲ್ಲಿ ಹೊಸ ಚೈತನ್ಯ ತುಂಬುವ ಕೆಲಸ ಮಾಡುತ್ತಿದೆ. ಸಂಪರ್ಕಕ್ಕೆ ಬಂದ ರೋಗಿಗಳನ್ನೆಲ್ಲ ನೋಂದಣಿ ಮಾಡಿಕೊಂಡು ನಿರಂತರವಾಗಿ ಚಿಕಿತ್ಸೆ ನೀಡುತ್ತಿದೆ. 15 ಬೆಡ್‌ಗಳಿರುವ ಈ ಸುಸಜ್ಜಿತ ಆಸ್ಪತ್ರೆಯಲ್ಲಿ ಹಿಮೋಫೀಲಿಯಾ ರೋಗಿಗಳಿಗೆ ಚಿಕಿತ್ಸೆಗೆ ಬೇಕಾದ ಎಲ್ಲ ಸೌಲಭ್ಯ, ಔಷಧಿ ಮತ್ತು ತರಬೇತಿ ಪಡೆದ ನುರಿತ ವೈದ್ಯರು ಇದ್ದಾರೆ. ಕರ್ನಾಟಕದಲ್ಲಿ 10 ಸಾವಿರ ಹಿಮೋಫೀಲಿಯಾ ರೋಗಿಗಳು ಇದ್ದಾರೆ ಎಂಬ ಅಂದಾಜು ಇದೆ. ಈಗಾಗಲೇ ಏಳು ನೂರು ರೋಗಿಗಳನ್ನು ಪತ್ತೆ ಹಚ್ಚಿ ಅವರಿಗೆ ಚಿಕಿತ್ಸೆ ನೀಡುತ್ತಿರುವ ಹಿಮೋಫೀಲಿಯಾ ಸೊಸೈಟಿಯು ರಾಜ್ಯಾದ್ಯಂತ ಇರುವ ಹಿಮೋಫೀಲಿಯಾ ರೋಗಿಗಳಿಗೆ ನೆರವು ನೀಡುವ ಹೆಬ್ಬಯಕೆ ಹೊಂದಿದೆ.

ರೋಗಿಗಳನ್ನು ಪತ್ತೆ ಮಾಡಿ, ಪರೀಕ್ಷೆಗಳ ಮೂಲಕ ರೋಗ ನಿರ್ಣಯ ಮಾಡಿ, ಅವರಿಗೆ ಬೇಕಾದ ಸೂಕ್ತ ಚಿಕಿತ್ಸೆಯನ್ನು ಕಲ್ಪಿಸುತ್ತಿರುವ ಹನಗವಾಡಿಯವರ ಈ ಆಸ್ಪತ್ರೆಯು ಹಿಮೋಫೀಲಿಯಾ ರೋಗಿಗಳ ಪುನರ್ವಸತಿ ಕೇಂದ್ರವೆನಿಸಿದೆ. ಚಿಕಿತ್ಸೆಗೆ ಬರುವ ಎಲ್ಲ ರೋಗಿಗಳಿಗೆ ಔಷಧಿಗಳನ್ನು ಪುಕ್ಕಟೆಯಾಗಿ ಇಲ್ಲವೇ ಹೆಚ್ಚಿನ ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ. 2003ರಲ್ಲಿ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನ ನುರಿತ ವೈದ್ಯರ ನೇತೃತ್ವದಲ್ಲಿ ಹಿಮೋಫೀಲಿಯಾ ಚಿಕಿತ್ಸೆ ಕುರಿತು ಕರ್ನಾಟಕದ ವೈದ್ಯರುಗಳಿಗೆ ವಿಶೇಷ ತರಬೇತಿಯನ್ನು ನೀಡಿರುವ 'ಹಿಮೋಫೀಲಿಯಾ ಸೊಸೈಟಿ'ಯು 'ಹಿಮೋಫೀಲಿಯಾ ಫೆಡರೇಷನ್ ಆಫ್ ಇಂಡಿಯಾ'ದೊಂದಿಗೆ ಕೈ ಜೋಡಿಸಿದೆ. ಇಡೀ

- ದೇಶದ 5ರಿಂದ 19ರ ವಯೋಮಾನದ ಒಟ್ಟು ಅಂಗವಿಕಲರ ಪೈಕಿ ಶೇ. 27ರಷ್ಟು ಜನ ಯಾವುದೇ ಶಿಕ್ಷಣ ಪಡೆಯುತ್ತಿಲ್ಲ.
- ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ ಶಿಕ್ಷಣ ಪಡೆದ ಅಂಗವಿಕಲರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

